## 23

# ಪರದೇಶಸ್ಥರು ಹಾಗೂ ಗಡಿಪಾರಾದವರು

## (11:8-22)

ಇಬ್ರಿಯ 11:13ರಲ್ಲಿ, ಈ ಪಾಠದ ತಲೆಬರಹವನ್ನು ನೀಡಲಾಗಿದೆ. ಹಿಂದಿನ ಪಾಠದಲ್ಲಿ, ನಾವು "ಅಧೈರ್ಯಕ್ಕೆ ದೇವರು ನೀಡುವ ಪರಿಹಾರದ ಕುರಿತು ನೋಡಿದೆವು." ಈ ಪಾಠದ ತಲೆಬರಹವನ್ನು "ಲೌಕಿಕತ್ವ ಹಾಗೂ ದುರಾಶೆಗೆ ದೇವರು ನೀಡುವ ಉತ್ತರ" ಎಂದು ನೀಡಬಹುದು. "ಈ ಪಾಠದಲ್ಲಿ ಅಬ್ರಹಾಮನೇ ಮುಖ್ಯ ವ್ಯಕ್ತಿಯಾಗಿರುವನು" (ಯೆಶಾಯ 41:8; ಆದಿಕಾಂಡ 15:6; ಗಲಾತ್ಯ 3:29).

### ಅಗತ್ಯವಿರುವ: ಒಂದು ಹೊಸ ದೃಷ್ಟಿಕೋನ

ಅಬ್ರಹಾಮನಂತೆ ನಾವುಗಳು ಈ ಲೋಕದಲ್ಲಿ "ಪರದೇಶಸ್ಥರು ಹಾಗೂ ಗಡಿಪಾರಾದವರಾಗಿದ್ದೇವೆ." ಈ ಪಾಠದ ಒಂದೊಂದು ಭಾಗದಲ್ಲಿ ಮೊದಲನೆಯದಾಗಿ ಅಬ್ರಹಾಮನ ಕುರಿತು ಆಲೋಚಿಸೋಣ (ಇಸ್ಸಾಕ ಮತ್ತು ಯಾಕೋಬನ ಜೊತೆಯಲ್ಲಿ). ವೈಯಕ್ತಿಕವಾಗಿ ಅನ್ವಹಿಸಿಕೊಳ್ಳಲು ಇಬ್ರಿಯ ಓದುಗರರ ಕುರಿತು ಆಲೋಚಿಸೋಣ.

#### ಅಬ್ರಹಾಮ ಹಾಗೂ ಇತರೆ ಪಿತೃಗಳು

ದೇವರು ಅಬ್ರಹಾಮನನ್ನು ಕರೆದಾಗ ಆತನು ಮೆಸಪಟೋಮಿಯದಲ್ಲಿದ್ದನು (ವಚನ 8). "ತಾನು ಹೋಗಬೇಕಾದ ಸ್ಥಳವು ಯಾವುದೆಂದು ತಿಳಿಯದೆ ಹೊರಟನು" ; ದೇವರು ಆತನಿಗೆ ಪ್ರಯಾಣ ನಕ್ಷೆಯನ್ನು ಕೊಟ್ಟುಕಳಿಸಲಿಲ್ಲ.

ಅಬ್ರಹಾಮನು "ಅನ್ಯ ದೇಶದಲ್ಲಿ ಇದ್ದವನಂತೆ ... ಇಸ್ಸಾಕನು ಯಾಕೋಬನೊಂದಿಗೆ ಡೇರೆಗಳಲ್ಲಿ ವಾಸಿಸಿದರು" (ವಚನ 9). ಅನ್ಯ ದೇಶದಲ್ಲಿ ವಾಸಿಸುವುದು ಸೆರೆಯಾಳಾಗಿ ವಾಸಿಸುವಂತಾಗುವದು. ಅಬ್ರಹಾಮನು ಮತ್ತು ಅವರ ಕುಟುಂಬದವರು "ಪರದೇಶದವರೂ ಪ್ರವಾಸಿಗಳೂ" ಆಗಿದ್ದರು (ವಚನ 13). "ಪರದೇಶದವರು" ಅನ್ಯದೇಶದವರು. "ಗಡಿಪಾರದವರು" ಎಂಬ ಪದಕ್ಕೆ KJV ಯಲ್ಲಿ "ಪ್ರಯಾಣಿಕರು (ಯಾತ್ರಿಕರು)" ಎಂದು ಭಾಷಾಂತರಿಸಿದೆ. ಒಬ್ಬ ಯಾತ್ರಿಕನು ಒಂದು ಸ್ಥಳದಲ್ಲಿ ವಾಸಿಸುವವನಲ್ಲ, ಅವನು ಪ್ರಯಾಣಿಕನಷ್ಟೆ. ಅಬ್ರಹಾಮನು ಸಾರಳ ಮರಣದ ಬಗ್ಗೆ ದುಃಖಿಸಿದಾಗ ಆ ಸ್ಥಳ ನಿವಾಸಿಗಳೊಂದಿಗೆ ಹೀಗೆ ಹೇಳಿದನು, "ನಾನು ನಿಮ್ಮಲ್ಲಿ ಪರದೇಶದವನೂ ಪರವಾಸಿಯೂ ಆಗಿದ್ದೇನಷ್ಟೆ" (ಆದಿಕಾಂಡ 23:4).

#### ಇಬ್ರಿಯ ಕ್ರೈಸ್ತರು ಹಾಗೂ ನಾವುಗಳು

ಇಬ್ರಿಯ 13:12-14ನ್ನು ಒಮ್ಮೆ ಕ್ಷಣದೃಷ್ಟಿಯಿಂದ ನೋಡಿ, ಅದು 11:8-22ರಲ್ಲಿ ಹೇಳಿದ್ದನ್ನು ಸ್ಥಾಪಿಸುತ್ತದೆ. ಅಬ್ರಹಾಮನಂತೆ, ನಾವು ಕರೆಯಲ್ಪಟ್ಟರೆ - ನಮ್ಮನ್ನು ಸುವಾರ್ತೆ ಮೂಖಾಂತರ ಕರೆಯುವರು (2 ಥೆಸಲೋನಿಕ 2:14). ನಮ್ಮ ನಿತ್ಯನಿವಾಸವು ಪರಲೋಕದಲ್ಲಿ ಇದೆ. ಈ ಲೋಕದಿಂದ ಅಲ್ಲಿಗೆ ಪ್ರಯಾಣಿಸುವ ಪ್ರಯಾಣಿಕರಾಗಿದ್ದೇವೆ (2 ಕೊರಿಂಥ 5:1-8).

### ಅಗತ್ಯವಿರುವ: ಒಂದು ಹೊಸ ಸ್ಪಷ್ಟತೆ (ಹೊಸ ಪ್ರಾಮುಖ್ಯತತೆ)

ನಾವು "ಈ ಭೂಲೋಕದಲ್ಲಿ ಪರದೇಶಸ್ಥರು ಹಾಗೂ ಗಡಿಪಾರರಾಗಿದ್ದೇವೆ," ನಮ್ಮ

ಪ್ರಾಮುಖ್ಯತೆಗಳು ಈ ಜೀವನ ಸಂಬಂಧ ವಿಷಯದ ಬಗ್ಗೆ ಇರಬಾರದು, ಆದರೆ ಬರುವ ಲೋಕದ ಬಗ್ಗೆ ಇರಬೇಕು. ಪುನಃ, ಮೊದಲಾಗಿ ಅಬ್ರಹಾಮನನ್ನು ನೋಡೋಣ, ನಂತರ ನಮ್ಮ ಬಗ್ಗೆ ಆಲೋಚಿಸೋಣ.

**ಅಬ್ರಹಾಮ ಹಾಗೂ ಇತರರು**

ಅಬ್ರಹಾಮನ ಕೇವಲ ಈ ಲೋಕದ ಜೀವಿತವನ್ನು ಮಾತ್ರ ಪರಿಗಣಿಸಬಾರದು. ಮಕ್ಪೇಲದ ಸಮಾಧಿ ಸ್ಥಳವನ್ನು ಹೊರತುಪಡಿಸಿ, ಅವನು ಯಾವುದೇ ವಿಧವಾದ ಸ್ವಂತ ಸ್ವಾಸ್ತವನ್ನು ಹೊಂದಿರಲಿಲ್ಲ (ಆದಿಕಾಂಡ 23:17-20).

ಈ ಪಟ್ಟಿಯಲ್ಲಿರುವ ಅಬ್ರಹಾಮ ಹಾಗೂ ಇತರರಲ್ಲಿದ್ದ ಪ್ರಮುಖ ಅಂಶಗಳನ್ನು ಗಮನಿಸುತ್ತೇವೆ. "ಅಬ್ರಹಾಮನು ಶಾಶ್ವತವಾದ ಅಸ್ತಿವಾರಗಳುಳ್ಳ ಪಟ್ಟಣವನ್ನು ಅಂದರೆ ದೇವರು ಸಂಕಲ್ಪಿಸಿ ನಿರ್ಮಿಸಿದ ಪಟ್ಟಣವನ್ನು ಎದುರು ನೋಡುತ್ತಿದ್ದನು" (ಇಬ್ರಿಯ 11:10; ಪ್ರಕಟನೆ 21:2). ಅವನು ಹಾಗೂ ಅವನ ವಂಶದವರು ಸ್ವದೇಶವನ್ನು ಹುಡುಕುತ್ತಿದ್ದರು (ಇಬ್ರಿಯ 11:14). "ಸ್ವದೇಶ" (ಪಾತ್ರಿಸ್) ಅಂದರೆ "ತಂದೆ ಇರುವ ಸ್ಥಳ" ಅವರು ಪರಲೋಕವೆಂಬ ಉತ್ತಮವಾದ ದೇಶವನ್ನು ಅಪೇಕ್ಷಿಸಿದರು (ವಚನ 16ಎ). "ಅದರ ಪರಿಣಾಮವಾಗಿ ದೇವರು ಅವರ ದೇವರೆನಿಸಿಕೊಳ್ಳುವದಕ್ಕೆ ನಾಚಿಕೊಳ್ಳಲಿಲ್ಲ" (ವಚನ 16ಬಿ; ವಿಮೋಚನಕಾಂಡ 3:6, 15; ಮತ್ತಾಯ 22:32).

**ಇಬ್ರಿಯ ಕ್ರೈಸ್ತರು ಹಾಗೂ ನಾವುಗಳು**

ಇಬ್ರಿಯ ಪತ್ರಿಕೆಯ ಮೂಲ ಓದುಗರು, ಆತ್ಮೀಕ ಸಂಗತಿಗಳ ಪ್ರಾಮುಖ್ಯತೆಯನ್ನು ಅರಿಯಬೇಕಿತ್ತು, ನಿತ್ಯವಾದದ್ದನ್ನು ಅರಿಯುವದು ಇನ್ನೂ ವಿಶೇಷವಾಗಿತ್ತು. ದೈಹೀಕವಾದದ್ದು ಪ್ರಾಮುಖ್ಯ ಎಂದು ತಿಳಿದರು, ಅದು ತಾತ್ಕಾಲಿಕವಾಗಿದೆ. ಮುಂದೆ ಬರುವಂತ ಲೋಕಕ್ಕಾಗಿ ನಾವು ಹಾತೊರೆಯಬೇಕು. ನಾವು ಪರಲೋಕದ ಕರೆಯನ್ನು ಹೊಂದಿದ್ದೇವೆ (ಇಬ್ರಿಯ 3:1). ನಾವು ಪರಲೋಕ ಸಂಸ್ಥಾನದವರು (ಫಿಲಿಪ್ಪಿ 3:20). ಅಲ್ಲಿ ನಮ್ಮ ಕರ್ತನು ಇದ್ದಾನೆ (ಯೋಹಾನ 14:2, 3) ಅಲ್ಲಿ ನಮ್ಮ ಸ್ವಾಸ್ತ್ಯ ಹಾಗೂ ನಮ್ಮ ನಿರೀಕ್ಷೆಯಿದೆ (ಮತ್ತಾಯ 6:20) (ಇಬ್ರಿಯ 6:19, 20). ಅಲ್ಲಿ ನಮ್ಮ ಹೆಸರುಗಳು ಬರೆಯಲ್ಪಟ್ಟಿದೆ (ಲೂಕ 10:20). ತಾನಿರುವಲ್ಲಿಗೆ ಯೇಸು ನಮ್ಮನ್ನು ಕರೆದೊಯ್ಯುವನು (ಯೋಹಾನ 14:3).

ಲೋಕವು ನಮ್ಮದಲ್ಲ, ನಾವು ಪರಲೋಕದವರು ಎಂದು ತಿಳಿಯುವದು ನಮ್ಮಲ್ಲಿ ವಿಶೇಷವಾದ ವ್ಯತ್ಯಾಸವನ್ನು ತೋರುತ್ತದೆ! ಹಾಗೂ ಅದು ನಮ್ಮ ಸಮಯ, ಹಣ, ಹಾಗೂ ತಲಾಂತುಗಳ ಮೇಲೆ ಪರಿಣಾಮ ಬೀರುತ್ತದೆ. ಅದು ನಮ್ಮ ನಿರಾಶೆಯನ್ನು ಬದಲು ಮಾಡುತ್ತದೆ. ನಾವು ಮಾಡವ ಪ್ರತಿ ವಿಷಯದಲ್ಲೂ *ಪರಿಣಾಮ* ಬೀರುತ್ತದೆ.

## ಅಗತ್ಯವಿರುವ: ನಿಜವಾದ ನಂಬಿಕೆ

ಇಂಥಾ ಒಂದು ದೃಷ್ಟಿಕೋನವನ್ನು ಹೊಂದಲು ಪ್ರೇರಣೆ ಯಾವದು, ಹಾಗೂ ನಿತ್ಯಜೀವವನ್ನು ಹೊಂದಲು, *ನಂಬಿಕೆಯೇ* ಪ್ರಮುಖವಾಗಿರುತ್ತದೆ.

**ಅಬ್ರಹಾಮ ಹಾಗೂ ಅವನ ಸಂಗಡಿಗರು**

ಅಬ್ರಹಾಮನು ಕರೆಯಲ್ಪಟ್ಟಾಗ "*ನಂಬಿಕೆಯಿಂದಲೇ* ವಿಧೇಯನಾದನು ..." (ವಚನ 8ಎ; ಒತ್ತಿ ಹೇಳಿದ್ದು ನನ್ನದು). "ಕರೆ" ಎಂಬುದನ್ನು "ವರ್ತಮಾನ ಕಾಲದಲ್ಲಿ" ಬಳಸಲಾಗಿದೆ. ಕರೆ ಬಂದಾಕ್ಷಣ ಉಂಟಾಗುವ ವಿಧೇಯತೆ ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು (ವಚನ 8ಬಿ). ನಂಬಿಕೆಯಿಂದಲೇ, ತಾನು ವಾಸಿಸಿದ್ದ ಸ್ಥಳವನ್ನು

ಬಿಟ್ಟು ಹೋದನು ಎಂಬ ಅರ್ಥವಾಗಿದೆ. "*ನಂಬಿಕೆಯಿಂದಲೇ* [ಅಬ್ರಹಾಮನು] ಪ್ರವಾಸಿಯಾಗಿ ಬದುಕಿದನು" ಅವನು ಕಾನಾನ್ ಹಾಗೂ ಅದರ ಸುತ್ತಣ ಪ್ರದೇಶಗಳಲ್ಲಿ ನೂರು ವರ್ಷಗಳ ಕಾಲ ವಾಸಿಸಿದನು (ವಚನ 9; ಒತ್ತಿ ಹೇಳಿದ್ದು ನನ್ನದು).

ಅಬ್ರಹಾಮನ ಸಂತತಿಯವರು ಸಹ ಅವನ ನಂಬಿಕೆಯನ್ನು ಹಂಚಿಕೊಂಡರು ಇದಲ್ಲದೆ, "ಸಾರಳು ವಾಗ್ದಾನ ... ಮಾಡಿದಾತನನ್ನು ನಂಬಿದಳು" (ವಚನ 11ಎ). ಬಲವು ಸಾರಳ ನಂಬಿಕೆಯಿಂದ ಉಂಟಾಗದೆ, ಅದು ದೇವರ ನಂಬಿಗಸ್ತಿಗೆಯಿಂದ ಉಂಟಾಗಿತ್ತು (ವಚನ 11ಎ). ಅದು ಅವಳ ನಂಬಿಕೆಯ ಮೂಲವಾಗಿತ್ತು. ಅಬ್ರಹಾಮನು ನಂಬಿಕೆಯಿಂದಲೇ ಇಸಾಕನನ್ನು ಸಮರ್ಪಿಸಿದನು (ವಚನ 17ಎ; ನೋಡಿರಿ ವಚನ 18, 19). ನಂಬಿಕೆಯಿಂದಲೇ ಇಸಾಕನು ಯಾಕೋಬನನ್ನು ಏಸಾವನನ್ನು ಆಶೀರ್ವದಿಸಿದನು (ವಚನ 20ಎ). ನಂಬಿಕೆಯಿಂದಲೇ ಯಾಕೋಬನು ಆಶೀರ್ವದಿಸಿ, ಕೋಲಿನ ಮೇಲೆ ಬಾಗಿಕೊಂಡು ದೇವರಿಗೆ ನಮಸ್ಕಾರಮಾಡಿದನು (ವಚನ 21). "ಯೋಸೇಫನು ತೀರಿ ಹೋಗುವಾಗ ಇಸ್ರಾಯೇಲ್ಯರು ಐಗುಪ್ತದಿಂದ ಹೊರಡುವದನ್ನು ಕುರಿತು ನಂಬಿಕೆಯಿಂದಲೇ ಮಾತಾಡಿದನು" (ವಚನ 22ಎ).

ಇವರೆಲ್ಲರು, "ನಂಬಿಕೆಯಿಂದಲೇ ಮರಣಹೊಂದಿದರು" (ವಚನ 13). ಇಬ್ರಿಯ ಬರಹಗಾರನು ತನ್ನ ಓದುಗರಲ್ಲಿ ಇದನ್ನೇ ಬಯಸಿದಂತೆ, ದೇವರು ಸಹ ನಮ್ಮಿಂದ ಇದನ್ನೇ ಬಯಸುತ್ತಾನೆ (ನೋಡಿರಿ ಪ್ರಕಟನೆ 14:13)!

**ಇಬ್ರಿಯ ಓದುಗರು ಹಾಗೂ ನಾವುಗಳು**

ನಮಗಿರುವ ಮಹಾ ಕೊರತೆ ಏನೆಂದರೆ, ನಂಬಿಕೆಯ ಕೊರತೆಯಾಗಿದೆ (ಇಬ್ರಿಯ 11:6; ರೋಮಾಪುರ 10:17). ಈ ಅಬ್ರಹಾಮನು ಮಾಡಿದಂತೆ, ನಾವುಗಳು ದೇವರ ಮಾತನ್ನು ಅಕ್ಷರಶಃ ಪಾಲಿಸಬೇಕು. ದೇವರ ಮಾತಿನಲ್ಲಿ ಕ್ರಿಯೆಗಳನ್ನು ಮಾಡಬಹುದಾದ ನಂಬಿಕೆಯನ್ನು ನಾವು ಹೊಂದಿರಬೇಕು (ಯಾಕೋಬ 2:14-26).

ಕೆಲವು ಸಾರಿ ಪ್ರಪಂಚದ ಸಮಸ್ಯೆಗಳು ನಮ್ಮನ್ನು ಅಧೈರ್ಯಗೊಳಿಸುತ್ತದೆ. ಅದನ್ನು ಹೇಗೆ ಪುನಃ ಸ್ಥಾಪಿಸೋಣ? ನಂಬಿಕೆಯಿಂದ ಬಯಸಬಹುದು. ನಂಬಿಕೆಯಿಂದ ಜೀವಿಸಿ, ಜವನ ಅಂತ್ಯಗೊಳಿಸಲು ಕರ್ತನು ಸಹಾಯಿಸಲಿ.

---

ಟಿಪ್ಪಣಿ

[1]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 133.